ಕೈಗಾರಿಕಾ ಘಟಕಗಳು ಉತ್ಪತ್ತಿ ಮಾಡುವ ವಸ್ತುಗಳ ಮೇಲೆ ಆಬ್ಕಾರಿ ತೆರಿಗೆ ವಿಧಿಸುವುದರಲ್ಲಿ ಭಾರತ ಸರ್ಕಾರವು ಕೆಲವು ರಿಯಾಯಿತಿಗಳನ್ನು ಪ್ರಕಟಿಸಿದೆ. ಸಣ್ಣ ಪ್ರಮಾಣದ ವಿಭಾಗದ ಕೈಗಾರಿಕೆಗಳಿಂದ ತಯಾರಾಗುವ ವಸ್ತುಗಳಿಗೆ ವಿಶೇಷ ಪ್ರಾಶಸ್ತ್ಯವನ್ನು ನೀಡಲಾಗಿದೆ. ಮೇಲೆ ತಿಳಿಸಿರುವುದರ ಜೊತೆಗೆ 'ಮೊಡಾವ್ಯಾಟ್" ಅನುಕೂಲವು ಸಹ ದೊರೆಯುತ್ತಿದೆ.

ಭಾರತ ಸರ್ಕಾರವು ಕೆಲವು ಕಚ್ಚಾ ವಸ್ತುಗಳನ್ನು ಅದರ ಭಾಗಗಳನ್ನು ಮತ್ತು ಇತರೇ ಬೇಕಾಗಿರುವ ಕೈಗಾರಿಕಾ ಸಾಮಗ್ರಿಗಳನ್ನು ಒ. ಜಿ. ಎಲ್. ಮೂಲಕ ಆಮದು ಮಾಡಿಕೊಳ್ಳಲಾಗುತ್ತಿದೆ. ಇದರ ಜೊತೆಗೆ ಕೆಲವು ವಸ್ತುಗಳನ್ನು ಆಮದು ಮಾಡಿಕೊಳ್ಳುವುದರಿಂದ ಅವುಗಳನ್ನು ಉಪಯೋಗಿಸುವವರಿಗೆ ಕೆಲವು ರಿಯಾತಿಗಳು ದೊರೆಯಲಾಗುತ್ತಿವೆ.

ಕೈಗಾರಿಕೋದ್ಯಮಿಗಳಿಗೆ ಕೆಲವು ಆದಾಯ ತೆರಿಗೆಗಳ ಅನುಕೂಲತೆಗಳನ್ನು ಕೇಂದ್ರ ಸರ್ಕಾರವು ಪ್ರಕಟಿಸಲಾಗಿದೆ.

## ಸಣ್ಣ ಕೈಗಾರಿಕೆಗಳ ತೊಂದರೆಯ ಬಗ್ಗೆ

೧೩೦೦ (೨೭೨೮) ಶ್ರೀ ಬಿ. ಧರ್ಮಪ್ಪ (ಸಾಗರ).—ಮಾನ್ಯ ಬಂದರು, ವಿಮಾನಯಾನ ಮತ್ತು ಸಣ್ಣ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಸಣ್ಣ ಕೈಗಾರಿಕೋದ್ಯಮಿಗಳಿಗೆ ಸಣ್ಣ ಕೈಗಾರಿಕೆಗಳಿಗಾಗಿ ಖರೀದಿಸುವ ಜಮೀನುಗಳಿಗೆ ಮತ್ತು ಷೆಡ್‌ಗಳಿಗೆ ಸ್ಟ್ಯಾಂಪ್ ಡ್ಯೂಟಿ ವಿಧಿಸುವುದರಿಂದ ಸದರಿ ಉದ್ಯೋಗದವರಿಗೆ ತುಂಬಾ ತೊಂದರೆ ಆಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಜಿಲ್ಲೆಗೊಂದರಂತೆ ಹಾಲಿ ಇರುವ ಸಿಂಗಲ್ ವಿಂಡೋ ಏಜೆನ್ಸಿಯಿಂದ ಸಣ್ಣ ಉದ್ಯಮಿಗಳಿಗೆ ಕಷ್ಟವಾಗಿರುವುದರಿಂದ ಜಿಲ್ಲಾ ಉಪ ವಿಭಾಗ ಕೇಂದ್ರಗಳಲ್ಲಿ ಒಂದೊಂದು ಸಿಂಗಲ್ ವಿಂಡೋ ಏಜೆನ್ಸಿ ತೆರೆಯಲು ಸರ್ಕಾರದವರು ಕ್ರಮ ಕೈಕೊಳ್ಳುವರೇ ?

ಇ) ಈ ಸಿಂಗಲ್ ವಿಂಡೋ ಏಜೆನ್ಸಿಗಳು ಎಲ್ಲಾ ಅನುಮತಿಗಳನ್ನು ಕೊಟ್ಟಾಗ್ಯೂ (ಕ್ಲಿಯರೆನ್ಸ್) ಅದರ ಬಗ್ಗೆ ಸಂಬಂಧ ಪಟ್ಟ ಹಣಕಾಸು ಸಂಸ್ಥೆಗಳು ಮಾನ್ಯ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಪರಿಹಾರ ಕ್ರಮಗಳೇನು ?

ಶ್ರೀ ಎಂ. ರಘುಪತಿ (ಬಂದರು, ವಿಮಾನಯಾನ ಮತ್ತು ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು).—

ಅ) ಹೌದು.

ಆ) ಜಿಲ್ಲಾ ಮಟ್ಟದಲ್ಲಿ ಸಿಂಗಲ್ ವಿಂಡೊ ಏಜೆನ್ಸಿ ಇರುವುದರಿಂದ ಉಪ ವಿಭಾಗ ಮಟ್ಟದಲ್ಲಿ ಒಂದು ಸಂಸ್ಥೆಯನ್ನು ತೆರೆಯುವುದು ಆವಶ್ಯಕವೆಂದು ಕಂಡುಬರುವುದಿಲ್ಲ. ಮತ್ತು ಈ ರೀತಿ ಜಿಲ್ಲಾ ಮಟ್ಟದಲ್ಲಿರುವ ಸಿಂಗಲ್ ವಿಂಡೋ ಏಜೆನ್ಸಿಗಳಿಗೆ ಸಂಪರ್ಕಿಸುವುದು ಕಷ್ಟವೆಂದು ಇಲ್ಲಿಯವರೆಗೂ ಯಾವುದೇ ಕೈಗಾರಿಕಾ ಸಂಘಗಳಿಂದ ಅಥವಾ ಘಟಕಗಳಿಂದಾಗಲೀ ಮನವಿ ಬಂದಿರುವುದಿಲ್ಲ.

ಇ) ಸಿಂಗಲ್ ವಿಂಡೋ ಏಜೆನ್ಸಿಯು ಕಾರ್ಯವ್ಯಾಪ್ತಿಯಲ್ಲಿ ಹಣಕಾಸು ಸಂಸ್ಥೆಗಳು ಸಣ್ಣ ಕೈಗಾರಿಕೆಗಳಿಗೆ ಮಂಜೂರು ಮಾಡುತ್ತಿರುವ ಧನಸಹಾಯದ ಬಗ್ಗೆ ಪರಿಶೀಲನೆ ಮಾಡಬಹುದಾಗಿದೆ. ಈ ರೀತಿ ಹಣಕಾಸು ಸಂಸ್ಥೆಗಳು ಮಾನ್ಯ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ) ಅನ್ವಯಿಸುವುದಿಲ್ಲ.

## ಸಾಗರ ತಾಲ್ಲೂಕಿನಲ್ಲಿ ಹುಲಿಗಳ ಹಾವಳಿ

೧೩೦೨ (೨೬೯೧) ಶ್ರೀ ಬಿ. ಧರ್ಮಪ್ಪ (ಸಾಗರ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಸಾಗರ ತಾಲ್ಲೂಕಿನಲ್ಲಿ ಇತ್ತೀಚೆಗೆ ಹುಲಿಗಳ ಮತ್ತು ಕಾಡು ಹಂದಿಗಳ ಹಾವಳಿ ಜಾಸ್ತಿಯಾಗಿದ್ದು ಅನೇಕ ಜಾನುವಾರುಗಳು ಮತ್ತು ಬೆಳೆನಾಶವಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ?